## ನಿಸ್ಪೃಹನೆ

# ಅಗತ್ಯಗಳನ್ನು ಪೂರೈಸುವ ದಿಟ ರಾಜಕಾರಣ ಬೇಕಿದೆ

ದೊಡ್ಡದಾಗಿ ಕನಸು ಕಾಣುವುದು ತಪ್ಪಲ್ಲ. 'ವಿಶ್ವಗುರು' ಪಟ್ಟಕ್ಕೂ ಏರೋಣ. ಆದರೆ ಅದಕ್ಕೂ ಮೊದಲು ದೈನಂದಿನ ಬದುಕಿನ ತೀರಾ ಅಗತ್ಯಗಳಾದ ರಸ್ತೆ, ಕುಡಿಯುವ ನೀರು, ಆಸ್ಪತ್ರೆ, ಶಿಕ್ಷಣ, ಶೌಚಾಲಯ ಇಂಥವುಗಳನ್ನು ಸಮರ್ಪಕವಾಗಿ ಒದಗಿಸುವುದು ಯಾವುದೇ ಸರ್ಕಾರದ ಪ್ರಾಥಮಿಕ ಜವಾಬ್ದಾರಿ.

ಒಟ್ಟು ಆಂತರಿಕ ಉತ್ಪಾದನೆಯನ್ನು (ಜಿಡಿಪಿ) ಮಾನದಂಡವನ್ನಾಗಿ ಇರಿಸಿಕೊಂಡರೆ ಭಾರತವು ವಿಶ್ವದಲ್ಲಿ ಐದನೇ ಅತಿದೊಡ್ಡ ಆರ್ಥಿಕ ಶಕ್ತಿ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿ ನಿಲ್ಲುವ ದೇಶಗಳ ಸಾಲಿನಲ್ಲಿ ಭಾರತಕ್ಕೂ ಒಂದು ಮಹತ್ವದ ಸ್ಥಾನ ಇದೆ. ಆದರೆ, ರಸ್ತೆ ಗುಂಡಿಯಂಥ ಒಂದು ಯಃಕಶ್ಚಿತ್ ಸಮಸ್ಯೆ ಈ ಬೃಹತ್ ದೇಶಕ್ಕೆ, ನಮ್ಮ ಆಡಳಿತ ವ್ಯವಸ್ಥೆಗೆ ಸವಾಲಾಗಿ ಪರಿಣಮಿಸಿದೆ. ಬೆಂಗಳೂರಿಗರನ್ನು ಈ ಸಮಸ್ಯೆ ದುಃಸ್ವಪ್ನವಾಗಿ ಕಾಡುತ್ತಿದೆಯಾದರೂ ಇದು ನಮ್ಮ ರಾಜಧಾನಿಗಷ್ಟೇ ಸೀಮಿತವಾದ ಸಮಸ್ಯೆಯಲ್ಲ. ಕೇರಳ ಹೈಕೋರ್ಟ್, ಬಾಂಬೆ ಹೈಕೋರ್ಟ್ ಕೂಡ ಈ ವಿಚಾರದಲ್ಲಿ ಚಾಟಿ ಬೀಸಿರುವ ವರದಿಗಳನ್ನು ಗಮನಿಸಿದರೆ ರಸ್ತೆ ಗುಂಡಿಗಳು ಅಲ್ಲಿ ಕೂಡ ಗದ್ದಲ ಎಬ್ಬಿಸಿವೆ ಎಂಬುದು ಗೊತ್ತಾಗುತ್ತದೆ.

ಸೂರ್ಯನ ಬಳಿಗೆ ಉಪಗ್ರಹ, ಚಂದ್ರನಲ್ಲಿಗೆ ನೌಕೆ ಕಳುಹಿಸುವ ಹಂತಕ್ಕೆ ನಮ್ಮ ವಿಜ್ಞಾನ, ತಂತ್ರಜ್ಞಾನ ರಂಗಗಳು ಬೆಳೆದಿವೆ. ಆದರೆ ಮೂಲಭೂತ ಅಗತ್ಯ ಎಂದು ಭಾವಿಸಲಾದ ಮತ್ತು ದಿನನಿತ್ಯ ಲಕ್ಷಾಂತರ ನಾಗರಿಕರು ಬಳಸುವಂತಹ ರಸ್ತೆಗಳನ್ನು ಸುಸ್ಥಿತಿಯಲ್ಲಿಡಲು ನಮಗೆ ಸಾಧ್ಯವಾಗುತ್ತಿಲ್ಲ. ಆದ್ಯತೆಗಳನ್ನು ಗುರುತಿಸುವಲ್ಲಿ ಮತ್ತು ಅಭಿವೃದ್ಧಿಯನ್ನು ನೋಡುವ ನಮ್ಮ ದೃಷ್ಟಿಕೋನದಲ್ಲಿ ಏನೋ ಐಬು ಇದೆ ಎಂಬುದಕ್ಕೆ ಇಂಥವುಗಳು ನಿದರ್ಶನಗಳಾಗಿ ನಿಲ್ಲುತ್ತವೆ.

ಜೀವಕ್ಕಿಂತ ಹೆಚ್ಚಿನದು ಏನೂ ಇಲ್ಲ. ರಸ್ತೆಗುಂಡಿ ಕಾರಣಕ್ಕೆ ಅಪಘಾತಕ್ಕೆ ಈಡಾಗಿ ಜೀವ ಕಳೆದುಕೊಳ್ಳುವಂಥ ಸ್ಥಿತಿ ಅತ್ಯಂತ ದಾರುಣವಾದುದು. ನಮ್ಮ ರಾಜಧಾನಿ ನಗರದಲ್ಲಿ ಒಂದು ವರ್ಷದ ಅವಧಿಯಲ್ಲಿ ಗುಂಡಿಗಳ ಕಾರಣದಿಂದಲೇ ಐವರು ಮೃತಪಟ್ಟಿದ್ದಾರೆ. ಈಚೆಗೆ ರಾಜಾಜಿನಗರದ ಬಳಿ ಮಹಿಳೆಯೊಬ್ಬರು ರಸ್ತೆಗುಂಡಿ ಕಾರಣಕ್ಕಾಗಿ ಸಂಭವಿಸಿದ ಅಪಘಾತದಲ್ಲಿ ಮೃತರಾದರು. ಗುಂಡಿಗಳ ಅವಾಂತರವು ಪದೇ ಪದೇ ಮಾಧ್ಯಮಗಳಲ್ಲಿ ಸುದ್ದಿಯಾಗುವುದು, ಕೋರ್ಟ್ ಕಟಕಟೆ ಏರುವುದು, ಸ್ಥಳೀಯ ಆಡಳಿತದ ವಿರುದ್ಧ ನ್ಯಾಯಮೂರ್ತಿಗಳು ಗುಡುಗುವುದು, ಗಡುವು ನೀಡುವುದು... ಇವೆಲ್ಲ ಏನನ್ನು ಸೂಚಿಸುತ್ತವೆ? ಇಂತಹ ಸಣ್ಣ ಸಮಸ್ಯೆಗಳನ್ನು ನಿವಾರಿಸಲು ಈ ಪರಿ ಏದುಸಿರು ಬಿಡಬೇಕಾದಂಥ ಸ್ಥಿತಿ ಬಂದಿರುವುದೇಕೆ?

ದೊಡ್ಡದಾಗಿ ಕನಸು ಕಾಣುವುದು ತಪ್ಪಲ್ಲ. 'ವಿಶ್ವಗುರು' ಪಟ್ಟಕ್ಕೂ ಏರೋಣ. ಆದರೆ ಅದಕ್ಕೂ ಮೊದಲು ದೈನಂದಿನ ಬದುಕಿನ ತೀರಾ ಅಗತ್ಯಗಳಾದ ರಸ್ತೆ, ಕುಡಿಯುವ ನೀರು, ಆಸ್ಪತ್ರೆ, ಶಿಕ್ಷಣ, ಶೌಚಾಲಯ... ಇಂಥವುಗಳನ್ನು ಸಮರ್ಪಕವಾಗಿ ಒದಗಿಸುವುದು ಯಾವುದೇ ಸರ್ಕಾರದ ಪ್ರಾಥಮಿಕ ಜವಾಬ್ದಾರಿ. ಅವುಗಳನ್ನು ಪಡೆಯುವುದು ಈ ದೇಶದ ನಾಗರಿಕನ ಮೂಲಭೂತ ಹಕ್ಕು. ಪ್ರಭುತ್ವವು ಹೊಣೆ ಮರೆತಿದೆ. ಪ್ರಜೆಗಳು ಹಕ್ಕು ಬಿಟ್ಟುಕೊಟ್ಟಿದ್ದಾರೆ. ಹಕ್ಕು ದಕ್ಕಿಸಿಕೊಳ್ಳುವ ಕೆಚ್ಚು ಜನರಲ್ಲಿ ಕ್ಷೀಣಿಸಿರುವುದೇ ಅಧಿಕಾರಸ್ಥರಲ್ಲಿ ಅಸಡ್ಡೆ ಹೆಚ್ಚಲು ಕಾರಣವಾಗಿರಬಹುದು.

ಜನಸಾಮಾನ್ಯರ ಮೂಲಭೂತ ಅಗತ್ಯಗಳಿಗೆ ಸಂಬಂಧಿಸಿದ ಕೊರತೆ, ದೋಷಗಳನ್ನು ನಿವಾರಿಸದ ಮತ್ತು ಅವುಗಳನ್ನು ಸಮರ್ಪಕವಾಗಿ ಪೂರೈಸದ ಹೊರತು ಬೇರೆ ಯಾವುದೇ ಬಗೆಯ ಅಭಿವೃದ್ಧಿಗೆ ಅರ್ಥ ಇಲ್ಲ. ಇಂತಹ ಕೆಲವೇ ಕೆಲವು ಮೂಲಭೂತ ಅಗತ್ಯಗಳನ್ನು ಕೇಂದ್ರವಾಗಿ ಇರಿಸಿಕೊಂಡು ರಾಜಕೀಯ ಪ್ರಯೋಗ ನಡೆಸಲು ಈಗ ಅವಕಾಶ ಇದೆ. ದೆಹಲಿಯಲ್ಲಿ 'ಆಮ್ ಆದ್ಮಿ ಪಕ್ಷ' ಈ ದಿಸೆಯಲ್ಲಿ ಒಂದು ಹಂತದ ಮಟ್ಟಿಗೆ ಪ್ರಯೋಗ ನಡೆಸಿದೆ. ಶಿಕ್ಷಣ, ಆರೋಗ್ಯ ಮತ್ತು ವಿದ್ಯುತ್ ಪೂರೈಕೆಯನ್ನು ಆದ್ಯತೆಯಾಗಿ ಮಾಡಿಕೊಂಡು, ಅದರ ಆಧಾರದಲ್ಲೇ ಚುನಾವಣಾ ರಾಜಕೀಯದ ದಾಳ ಉರುಳಿಸತೊಡಗಿದೆ. ಅದರಲ್ಲಿ ಯಶಸ್ಸನ್ನೂ ಕಂಡಿದೆ.

ದಿನಬೆಳಗಾದರೆ ಬೇಡದ ವಿವಾದಗಳು, ಕಿರಿಕಿರಿ ಉಂಟುಮಾಡುವಂಥ ಹೇಳಿಕೆಗಳು. ಅದಿಲ್ಲದಿದ್ದರೆ ಭವ್ಯತೆಯ ಬಲೂನು ಹಾರಿಬಿಟ್ಟು ಜನಸಮೂಹವನ್ನು ಭ್ರಮೆಗೆ ದೂಡುವ ಮಾತು. ಭ್ರಷ್ಟಾಚಾರದ ಆರೋಪಗಳು ಮತ್ತು ಅದಕ್ಕೆ ಸಾಕ್ಷ್ಯ ಕೇಳುವ ಐಲಾಟ. ಆಡಳಿತ ವೈಫಲ್ಯಕ್ಕೆ ಮತ್ತು ಭ್ರಷ್ಟಾಚಾರಕ್ಕೆ ರಸ್ತೆ ಗುಂಡಿಗಳಿಗಿಂತ ಹೆಚ್ಚಿನ ಸಾಕ್ಷ್ಯ ಬೇಕೇ? ಜನರ ಕಣ್ಣಿಗೆ ಮಂಕುಬೂದಿ ಎರಚುವ ಗಿಲೀಟು ರಾಜಕಾರಣಕ್ಕಿಂತ ಕನಿಷ್ಠ ಕಾರ್ಯಕ್ರಮಗಳನ್ನು ಮುಂದಿಟ್ಟು ಅವರನ್ನು ಒಲಿಸಿಕೊಳ್ಳುವ ದಿಟ ರಾಜಕಾರಣವು ಇಂದಿನ ಅಗತ್ಯ.

ಈ ಎರಡು–ಮೂರು ಕ್ಷೇತ್ರಗಳು ನಮ್ಮ ಆದ್ಯತೆ. ಐದು ವರ್ಷಗಳಲ್ಲಿ ರಸ್ತೆ, ಆರೋಗ್ಯದಂಥ ಅತ್ಯಗತ್ಯ ಸೌಲಭ್ಯಗಳನ್ನು ಸ್ಥಳೀಯರಿಗೆ ಸಮರ್ಪಕವಾಗಿ ಒದಗಿಸುತ್ತೇವೆ ಎಂದು ನಿರ್ದಿಷ್ಟವಾಗಿ ಹೇಳಿ ಅಧಿಕಾರ ಹಿಡಿಯುವಂಥ ರಾಜಕಾರಣ ಬೇಕು. ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಹಂತಕ್ಕೂ ಇಂತಹ ಪ್ರಯೋಗಗಳು ತಲುಪಿದರೆ ಕೊನೇಪಕ್ಷ ಮೂಲಭೂತ ಅಗತ್ಯಗಳಿಗೆ ಸಂಬಂಧಿಸಿದ ಕೆಲವಾದರೂ ಸಮಸ್ಯೆಗಳಿಂದ ಮುಕ್ತಿ ಪಡೆಯಬಹುದು.

■ ಎನ್‌. ಉದಯಕುಮಾರ್



ಈಶ್ವರ್